S.P.V.V.S'S

# G. P. PORWAL ARTS, COMMERCE AND V. V. SALIMATH SCIENCE COLLEGE SINDAGI - 586 128

## DEPARTMENT OF KANNADA

2022-2023

## PROJECT WORK



# PRAMUKHA AADARSHA VYAKTIGALA VYAKTITVA

# (ಪ್ರಮುಖ ಆದರ್ಶ ವ್ಯಕ್ತಿಗಳ ವ್ಯಕ್ತಿತ್ವ)

**Submitted By**

Pallavi M Jangani

Department of Kannada

B.Sc II[nd] Sem

Reg No : U15NB22S0019

**Submitted to**

Pratika.M.Talawar

(Kannada Assistant professor)

Department of Kannada

G.P.P & V.V.S College Sindagi

Head
Dept. of Kannada
G.P.P. Arts, Commerce & V.V.S. Science College, SINDAGI-586128.

Co-ordinator IQAC
G. P. Porwal Arts, Comm & V. V. Salimath Science College, SINDGI-586128. Dt. Vijayapur

Principal,
G. P. Porwal Arts, Comm & V. V. Salimath Sc. College
SINDGI-586128

S.P.V.V.S'S

# G. P. PORWAL ARTS, COMMERCE AND V. V. SALIMATH SCIENCE COLLEGE SINDAGI - 586 128

## DEPARTMENT OF KANNADA

## CERTIFICATE

**Register No:** U15NB22S0019 **Class:** B.Sc IInd Sem

This is to certify that ,Kumari Pallavi M Jangani satisfactorily completed Project work on " Pramukha aadarsha vyaktigala vyaktitva" (ಪ್ರಮುಖ ಆದರ್ಶ ವ್ಯಕ್ತಿಗಳ ವ್ಯಕ್ತಿತ್ವ) under my supervision in G.P.Porwal Arts, Commerce and V. V. Salimath Science College Sindagi in the Academic year 2022-2023.

HOD

Pratika M Talawar
Kannada Assistant Proffessor
Department of Kannada
G.P.P & V.V.S College sindagi

Dr . S.I.Bhandari
Department of Kannada
G.P.P & V.V.S College sindagi

Co-ordinator IQAC
G. P. Porwal Arts, Comm & V. V. Salimath Science College, SINDGI-586128. Dt:Vijayapur

Principal,
G. P. Porwal Arts, Comm & V. V. Salimath Sc. College SINDGI-586128 College Code: 5334

# ಪರಿವಿಡಿ :-


| ಕ್ರ.ಸಂ | ವಿಷಯ | ಪುಟ ಸಂ |
|---|---|---|
| ೦೧ | ಆದರ್ಶ | ೦೧ - ೦೪ |
| ೦೨ | ಮಹಾತ್ಮ ಗಾಂಧಿ | ೦೫ - ೧೩ |
| ೦೩ | ಸ್ವಾಮಿ ವಿವೇಕಾನಂದ | ೧೪ - ೧೮ |
| ೦೪ | ಬಸವಣ್ಣ | ೧೯ - ೨೩ |
| ೦೫ | ಉಪಸಂಹಾರ | ೨೪ |
| ೦೬ | ಉಲ್ಲೇಖಗಳು | ೨೫ |


Head
Dept. of Kannada
G.P.P. Arts, Commerce & V.V.S. Science
College, SINDAGI-586128.

Co-ordinator IQAC
G. P. Porwal Arts, Comm & V. V. Salimath
Science College, SINDGI-586128. Dt:Vijayapur

Principal,
G. P. Porwal Arts, Comm. &
V. V. Salimath Sc. College,
SINDGI-586128. College Code: 5234

# ಆದರ್ಶ

ಆದರ್ಶ ಎಂದರೆ ಮಾದರಿ. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಆದರ್ಶನಾಗಿರಬೇಕಾದರೆ ಮೊದಲು ಒಳ್ಳೆಯ ಮನುಷ್ಯನಾಗಿರಬೇಕು. ಒಳ್ಳೆಯ ಮನುಷ್ಯ ಎಂದರೆ ಪ್ರೀತಿ, ತೃಪ್ತಿ, ಸಾಮರಸ್ಯ ಹುರಿಗಣಾವ. ಶಾಂತತೆ, ಸಹಿಷ್ಣುತೆ, ಒಳ್ಳೆಯ ಗುಣ ಮತ್ತು ದೃಢತೆ, ಎಲ್ಲವನ್ನು ಸಹಿಸಿಕೊಳ್ಳುವ, ಅನುಸರಿಸಿಕೊಳ್ಳುವ ಭಾವನೆ ಇರಬೇಕು. ಪ್ರತಿಯೊಂದು ವಸ್ತುವಿಗೂ, ಮನುಷ್ಯನಿಗೂ, ಪ್ರಾಣಿಗಳಿಗೂ ಅದರದ್ದೆ ಆದ ಬೆಲೆ, ಮಹತ್ವತೆ ಇರುತ್ತದೆ. ಸಿಂಹಕ್ಕೆ ಕಾಡಿನ ರಾಜ ಎನ್ನುವ ಬೆಲೆ. ಆ ಬೆಲೆ ಬೇರೆ ಯಾವ ಪ್ರಾಣಿಗೂ ಇಲ್ಲ ಏಕೆಂದರೆ ಕಾಡಿನ ರಾಜ ಎಂದು ಹೇಳಬೇಕಾದರೆ ಆ ಸಿಂಹಕ್ಕೆ ಇರುವ ಗುಣ, ಧೈರ್ಯತೆ ಬೇರೆ ಪ್ರಾಣಿಗಳಿಗೆ ಇಲ್ಲ. ಇಲ್ಲ ಎಂದರೆ ಇಲ್ಲವೇ ಇಲ್ಲ ಎಂದಲ್ಲಾ ಇದೆ ಆದರೆ ಸಿಂಹಕ್ಕೆ ಇರುವಷ್ಟಿಲ್ಲಾ. ಮನುಷ್ಯರು ಹಾಗೇ ಅವರಿಗೆ ಒಂದು ಬೆಲೆ, ಗುಣ ಇದೆ. ಹೀಗೆ ಪ್ರತಿಯೊಂದಕ್ಕೂ ಅದರದ್ದೇ ಆದ ಗುಣ, ಬೆಲೆ ಇದೆ. ಒಂದಕ್ಕೆ ಗುಣ ಇನ್ನೊಂದಕ್ಕೆ ಇಲ್ಲ. ಹಾಗೆ ಒಬ್ಬರಿಗೆ ಆದರ್ಶವಾಗುವ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೂ ಅವರೇ ಆದರ್ಶವಾಗಿರಬೇಕು ಎಂದೇನು ಇಲ್ಲ.

ನಮಗೆ ನಮ್ಮದೇ ಆದ ಆದರ್ಶವಾದ ವ್ಯಕ್ತಿಗಳಿರುತ್ತಾರೆ. ಅವರು ಚಿತ್ರನಟ-ನಟಿಯರೇ, ರಾಜಕೀಯದವರೇ, ದೇಶಭಕ್ತರೇ, ಸ್ವಾತಂತ್ರ್ಯ ಹೋರಾಟಗಾರರೇ, ಕ್ರೀಡಾಪಟುಗಳೇ ಅಥವಾ ಇನ್ನೂ ಬೇರೆ ಯಾರೋ ಆಗಿರಬಹುದು. ಅದು ನಮ್ಮ ನಮ್ಮ ಅಭಿರುಚಿಗೆ ತಕ್ಕದ್ದು. ನಮಗೆ ಆದರ್ಶವಾಗಿರುವ ವ್ಯಕ್ತಿ ನಮ್ಮಲ್ಲಿ ಸ್ಫೂರ್ತಿ,

ಚೈತನ್ಯತೆ, ಹುಮ್ಮಸ್ಸು ನೀಡುತ್ತಾರೆ. ನೇರವಾಗಿ ಅಲ್ಲದಿದ್ದರೂ ಅವರ ಒಂದು ಧ್ವನಿ, ಚಿತ್ರ ನೋಡಿದಾಗ ನಮ್ಮಲ್ಲಿ ಬದಲಾವಣೆ ಖಂಡಿತ ಆಗುತ್ತದೆ. ನಮಗೆ ಆದರ್ಶವಾಗಿರುವ ವ್ಯಕ್ತಿಯನ್ನು ಅನುಸರಿಸಿದಾಗ ನಮ್ಮ ಸ್ವಭಾವದಲ್ಲಿ ಕೊಂಚ-ಕೊಂಚ ಬದಲಾವಣೆ ಆಗುತ್ತಲೇ ಹೋಗುತ್ತದೆ. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಆದರ್ಶವಾಗಬೇಕಾದರೆ ಅವನ ಮನಸ್ಸಿನಲ್ಲಿ ಯಾವುದೇ ಗೊಂದಲ, ಕಲ್ಮಶ, ಸರಿ-ತಪ್ಪು, ಇವುಗಳ ಪರಿಗಣನೆ ಇರುವುದಿಲ್ಲ. "ಅಡ್ಡ ಗೋಡೆಯ ಮೇಲೆ ದೀಪ" ಇಟ್ಟಾಗ ಹೇಗೆ ಯಾವುದೇ ಕಡೆ ಸರಿಯಾದ ಬೆಳಕು ಕಾಣುವುದಿಲ್ಲವೋ ಹಾಗೆ ಮನಸ್ಸಿನಲ್ಲಿ ಗೊಂದಲಗಳನ್ನು ಹೊತ್ತ ವ್ಯಕ್ತಿ ಯಾವತ್ತೂ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ.

ಆದರ್ಶ ವ್ಯಕ್ತಿಗಳು ಹುಟ್ಟುತ್ತಲೇ ಆದರ್ಶವನ್ನು ಹೊತ್ತಿರುವುದಿಲ್ಲ. ಅವರಿಗೆ ಒಂದು ಘಟನೆ, ಇನ್ನೊಬ್ಬ ವ್ಯಕ್ತಿ ಅಥವಾ ಒಂದು ಪುಸ್ತಕ ಅವರು ಬೆಳೆದಂತೆ ಅಥವಾ ಬೆಳೆದಾಗ ಸ್ಫೂರ್ತಿಯನ್ನು, ಚಿಲುಮೆಯನ್ನು ನೀಡುತ್ತದೆ. ಮತ್ತು ನೀಡಿರುತ್ತದೆ. ಆ ವಿಷಯ ಅವರ ಮನಸ್ಸಿನಲ್ಲಿ ನಾಟಿ, ಆಳವಾಗಿ ಬೇರೂರಿ, ಚಿಗುರಿ, ಬೇರೂರಿದಾಗ ಮಾತ್ರ ಅವನ ದೃಢ ನಿರ್ಧಾರಗಳನ್ನು, ಗಟ್ಟಿತನದಿಂದ, ಧೈರ್ಯದಿಂದ ತೆಗೆದುಕೊಳ್ಳಲು ಸಾಧ್ಯ. ಆದರೆ ಆ ವಿಷಯ ವ್ಯಕ್ತಿಯ ಮನಸ್ಸಿನಲ್ಲಿ ಬೇರೂರದೆ ಇದ್ದಾಗ ಅವನು ಅಥವಾ ಅವರು ಆ ಕ್ಷಣಕ್ಕೆ ಮಾತ್ರ ಕೇಳಿದಾಗ, ಆ ಕ್ಷಣಕ್ಕೆ

ಮಾತ್ರ ಭಾವುಕರಾಗಿ ಮತ್ತೊಂದು ಕ್ಷಣಕ್ಕೆ ಅದರ ಬಗ್ಗೆ ಯೋಚಿಸದೆ. ಮರೆತು ಹೋಗುವುದಾಗಲಿ, ಮನಸ್ಸನ್ನು ವಿಚಲಿತಗೊಳಿಸಿಕೊಂಡು ದೂರ ಓಡಿ ಹೋಗುತ್ತಾರೆ. ಅಂತಹ ವ್ಯಕ್ತಿಗಳು ಎಂದಿಗೂ ಆದರ್ಶ ವ್ಯಕ್ತಿಗಳಾಗಲಾರರು. ಸಮಸ್ಯೆಯನ್ನು ಎದುರಿಸಿ ಮುಂದೆ ಹೋಗುವವರು ಮಾತ್ರ ವಿಜಯವನ್ನು 'ಸಾಧಿಸುತ್ತಾರೆ. ಆದರ್ಶ ವ್ಯಕ್ತಿಗಳಾಗಿ ಪರಿವರ್ತನೆಗೊಳ್ಳುತ್ತಾರೆ. ಸಮಸ್ಯೆಯನ್ನು ಬಿಟ್ಟು ಹೆದರಿ ಕೂರುವುದರಿಂದ, ದೂರ ಓಡಿ ಹೋಗುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ ಹಾಗೂ ಅಂತಹವರೇ ನಮ್ಮ ಜಗತ್ತಿನಲ್ಲಿ ಇದ್ದಾರೆ ಮತ್ತು ಸರ್ವೇಸಾಮಾನ್ಯ ವ್ಯಕ್ತಿಗಳು ಎನ್ನಿಸಿಕೊಳ್ಳುತ್ತಾರೆ.

ವಿಚಲಿತ ಜೀವನ ಎಂದಿಗೂ ಸೂಕ್ತವಲ್ಲ. ಮತ್ತು ಸೂಕ್ತವಾಗಿರುವುದಿಲ್ಲ. ಹಾಗಾಗಿ ಮನುಷ್ಯನ ಬದುಕಿನಲ್ಲಿ ಆದರ್ಶವಾಗಿರುವ ವ್ಯಕ್ತಿಯೊಬ್ಬ ಇರಬೇಕು ಇಲ್ಲವೇ ಪುಸ್ತಕಗಳನ್ನಾದರೂ ಆದರ್ಶವಾಗಿ ಹತ್ತಿರವೇ ಇಟ್ಟುಕೊಂಡಿರಬೇಕು. ಅಂದಾಗ ಆ ವ್ಯಕ್ತಿ ಒಳ್ಳೆಯ ಜೀವನ, ಒಳ್ಳೆಯ ತನ, ಒಳ್ಳೆಯ ಮನಸ್ಸನ್ನು ಹೊಂದುತ್ತಾನೆ. ಆ ವ್ಯಕ್ತಿ ಈ ಯಾವ ಗುಣವಿಲ್ಲದಿದ್ದರೂ ಪುಸ್ತಕಗಳಿಂದ, ವ್ಯಕ್ತಿಗಳಿಂದ ಅವನು ಪರಿವರ್ತನೆಯನ್ನು ಹೊಂದುತ್ತ ಮುಂದೆ ಸಾಗುತ್ತಾನೆ. ಆದರ್ಶ ಎನ್ನುವ ಪದ ಚಿಕ್ಕದಲ್ಲ. ಸುಮ್ಮನೆ ಯಾರಿಗೂ ದಕ್ಕುವಂತಹದ್ದು ಅಲ್ಲ.

ಒಬ್ಬ ಮನುಷ್ಯ ಎಂದ ಮೇಲೆ ಒಳ್ಳೆಯ ಗುಣ, ಆದರ್ಶದಾಯಕ ಜೀವನವನ್ನು ಬದುಕಬೇಕು. ಆದರ್ಶದಾಯಕ ಜೀವನವಿಲ್ಲ ಎಂದರೆ ಆ ಮನುಷ್ಯನ ಜೀವನ ಅಕ್ಷರಗಳಿಲ್ಲದ ಪುಸ್ತಕದಂತಾಗುತ್ತದೆ. ಜೀವನ, ಬದುಕು ಎಂದಾಗ ಇಲಿ, ಬೆಕ್ಕು, ಹಂದಿಯೂ ಕೂಡ ಜೀವಿಸುತ್ತವೆ. ಮನುಷ್ಯ ಎಂದ ಮೇಲೆ ವಿಶಿಷ್ಟತೆ ಬೇಡವೇ (ಇರಬೇಕು). ಒಂದು ಆದರ್ಶದ ಗುರಿಯನ್ನು ಇಟ್ಟುಕೊಂಡು ಬೇರೆಲ್ಲಾ ಕೆಟ್ಟ ವಿಚಾರಗಳನ್ನು ಬಿಟ್ಟು, ದೂರದಲ್ಲಿ ಇಟ್ಟು ಒಂದೇ ಮನಸ್ಸಿನಿಂದ, ಏಕ ಚಿತ್ತ ಮನಸ್ಸಿನಿಂದ ಗುರಿಯತ್ತ ಸಾಗಿದಾಗ ಮಾತ್ರ ನಮ್ಮ ಶ್ರಮಕ್ಕೆ ತಕ್ಕ ಫಲ ಸಿಗುತ್ತದೆ. ನಾವು ಸಾಧನೆ ಮಾಡಬೇಕೆಂದರೆ ಪರಿಶ್ರಮ, ಏಕ ಚಿತ್ತ ಮನಸ್ಸು ಅತ್ಯವಶ್ಯಕ. ಆದರ್ಶ ಎಂದರೆ ಭೋದಿಸಲು, ತೋರಿಕೆಗೆ ಮಾತ್ರ ಇರುವಂತಹದಲ್ಲ. ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಾವು ಒಬ್ಬ ವ್ಯಕ್ತಿ ಎಂದರೆ ಆದರ್ಶ ವ್ಯಕ್ತಿಯಾಗಲು ಸಾಧ್ಯ. ಅಂತಹ ಮಾದರಿಯ ಆದರ್ಶ ವ್ಯಕ್ತಿತ್ವವುಳ್ಳ ವ್ಯಕ್ತಿಗಳ ಬಗ್ಗೆ ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.



Head
Dept. of Kannada
G.P.P. Arts, Commerce & V.V.S. Science
College, SINDAGI-586128

Co-ordinator IQAC
G. P. Porwal Arts, Comm & V. V. Salimath
Science College, SINDGI-586128, Dt:Vijayapur

Principal,
G. P. Porwal Arts, Comm &
Sc. College

# ೧. ಮಹಾತ್ಮ ಗಾಂಧೀಜಿ

ಗಾಂಧೀಜಿಯವರ ಪೂರ್ಣ ಹೆಸರು ಮೋಹನದಾಸ್-ಕರಮಚಂದ್ ಗಾಂಧಿ. ಇವರು ೧೮೬೯ ನೇ ಅಕ್ಟೋಬರ್ ೦೨ ರಂದು ಭಾರತ ದೇಶದ ಗುಜರಾತ್ ರಾಜ್ಯದ ಪೋರಬಂದರ್‌ನಲ್ಲಿ ಜನಿಸಿದರು. ಇವರ ತಂದೆ ಕರಮಚಂದ ಗಾಂಧಿ ಮತ್ತು ತಾಯಿ ಪುತಳಿಬಾಯಿ. ಇವರು ನಮ್ಮ ದೇಶದ ಮಹಾನ್ ಸ್ವಾತಂತ್ರ್ಯಹೋರಾಟಗಾರರು ಎಂದು ಹೇಳಲು ಮತ್ತು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ. ಇವರು ಅಹಿಂಸಾವಾದಿಯಾಗಿದ್ದರು. ಇವರು ಸತ್ಯ, ಶಾಂತಿ, ಅಹಿಂಸೆ ಮತ್ತು ತ್ಯಾಗದ ಮೂರ್ತಿ ಎಂದರೆ ತಪ್ಪಾಗುವುದಿಲ್ಲ. ಗಾಂಧೀಜಿಯವರ ಈ ಎಲ್ಲಾ ಗುಣಗಳು ಸ್ಫೂರ್ತಿ ಮತ್ತು ಆದರ್ಶದಾಯಕವಾಗಿವೆ. ಇವರು ಚಿಕ್ಕ ವಯಸ್ಸಿನಲ್ಲಿ ಇದ್ದಾಗ ಇವರ ತಾಯಿ ಪುತಳಿಬಾಯಿ. ಅವರು ರಾಮಾಯಣ, ಮಹಾಭಾರತಗಳಂತಹ ಕತೆಗಳು ಹೇಳುತ್ತಿದ್ದರು. ಅವರ ಆ ಕತೆಗಳು ಗಾಂಧೀಜಿಯವರ ಬದುಕಿಗೆ, ಅಹಿಂಸಾ ಮಾರ್ಗಕ್ಕೆ ಸ್ಫೂರ್ತಿಯಾಗಿದೆ. ಹಾಗೂ ಇವರು ಸತ್ಯ ಹರಿಶ್ಚಂದ್ರ. ಶ್ರವಣಕುಮಾರರ ನಾಟಕ, ಬುದ್ಧನ ಜೀವನ ಚರಿತ್ರೆಯನ್ನು ಓದಿ ಮತ್ತು ಭಗವದ್ಗೀತೆಗಳಿಂದ ಪ್ರಭಾವಿತರಾಗಿದ್ದರು. ಗಾಂಧೀಜಿಯವರು ಮಹಾನ್ ವ್ಯಕ್ತಿ. ಮಹಾತ್ಮರಾಗಿದ್ದಾರೆ. ಎಂದರೆ ಅವರ ಹಿಂದೆ ಅವರ ಪರಿಶ್ರಮ, ಸಹನ-ತಾಳ್ಮೆ, ಸದೃಢತೆ. ಏಕಚಿತ್ತ ಮನಸ್ಸು ಕಾರಣವಾಗಿದೆ.

## ➤ ಗಾಂಧೀಜಿಯವರ ತತ್ವಗಳು :-

* ರಕ್ತಮಾಂಸಗಳಿಂದ ಕೂಡಿದ ಒಬ್ಬ ವ್ಯಕ್ತಿ ಅಹಿಂಸೆ, ಸತ್ಯ, ಶಾಂತಿ ಎಂದು ಬದುಕಿದ್ದಾನೆ, ನಡೆದಾಡಿದ್ದಾರೆ ಎಂದರೆ ಮುಂದಿನ ಪೀಳಿಗೆಗಳಿಗೆ ನಂಬುವುದು ಕಷ್ಟವಾಗುತ್ತದೆ ಎಂದು ಅಲ್ಬರ್ಟ್ ಐನ್‌ಸ್ಟೀನ್‌ನವರಿಗೆ ಗಾಂಧೀಜಿಯವರ ಬಗ್ಗೆಗಿನ ಒಳಭಾವನೆ ಮತ್ತು ಯಾರೇ ಅವರನ್ನು ನೋಡಿದರೂ, ಅವರ ಜೀವನದ ಬಗ್ಗೆ ತಿಳಿಯುಕೊಂಡವರ ಸಂದೇಹವಿದು.

* ಗಾಂಧೀಜಿಯವರ ಮುಖ್ಯ ತತ್ವಗಳೆಂದರೆ ಅವು ಸತ್ಯ ಮತ್ತು ಅಹಿಂಸೆ. ಅಹಿಂಸೆ ಎನ್ನುವುದು ನಮ್ಮ ಭಾರತೀಯ ಧಾರ್ಮಿಕ ವಿಚಾರದಲ್ಲಿ ಅನೇಕ ಶತಮಾನಗಳಿಂದ ಅಸ್ತಿತ್ವದಲ್ಲಿದ್ದಂತಹ ತತ್ವವಾಗಿದೆ. ಗಾಂಧೀಜಿಯವರು ತತ್ವಗಳನ್ನು ಕೇವಲ ಭೋಧಿಸುತ್ತಿರಲಿಲ್ಲ, ಅವರು ಭೋಧಿಸುವುದರ ಜೊತೆಗೆ ಅದನ್ನು ಪಾಲಿಸುವಂತಹ ವ್ಯಕ್ತಿಯಾಗಿದ್ದರು. ಅವರು ಏನನ್ನು ಭೋಧಿಸುತ್ತಿದ್ದರೋ ಅದನ್ನೆ ಪಾಲಿಸುತ್ತಿದ್ದರು.

* ಇವರು ಅಪ್ಪಟ ಸಸ್ಯಹಾರಿಯಾಗಿದ್ದರು ಮತ್ತು ಲಂಡನ್‌ನಲ್ಲಿ ಓದುತ್ತಿದ್ದಾಗ ಅವರು ಸಸ್ಯಹಾರದ ಬಗ್ಗೆ ಪುಸ್ತಕಗಳನ್ನು ಕೂಡ ಬರೆದಿದ್ದರು. ಹಿಂದೂ ಮತ್ತು ಜೈನ ವರ್ಗಗಳಲ್ಲಿ ಸಸ್ಯಾಹಾರದ ತತ್ವ ಶತ-ಶತಮಾನಗಳಿಂದಲೂ ಆಳವಾಗಿ ಬೇರೂರಿದೆ. ಸಸ್ಯಹಾರ ಎಂದು ಒಳ್ಳೆಯ ಅಭ್ಯಾಸವಾಗಿತ್ತು. ನಮಗೆ ಬೇಕಾಗುವ ಎಲ್ಲಾ ಪೋಷಕಾಂಶಗಳು ಸಸ್ಯಹಾರ-ದಲ್ಲಿಯೇ ಇರಬೇಕಾದರೆ ಮಾಂಸಹಾರವೇಕೆ ಬೇಕ ಎಂದಿದ್ದರು.

* ಕಾಲಕಾಲಕ್ಕೆ ಉಪವಾಸ, ವ್ರತಗಳನ್ನು ಮಾಡುತ್ತಿದ್ದ ಇವರು ಅವುಗಳನ್ನು ಸ್ವಾತಂತ್ರ್ಯ ಹೋರಾಟಗಳಲ್ಲಿ ಪ್ರಯೋಗಿಸಿದರು. ಉಪವಾಸ ಸತ್ಯಾಗ್ರಹವನ್ನಾಗಿ ಮಾಡಿದರು. ಇವರು ಮೌನ ವ್ರತವನ್ನು ಕೂಡ ಆಚರಿಸುತ್ತಿದ್ದರು. ಇದರಿಂದ ಗಾಂಧೀಜಿಯವರ ಮನಸ್ಸಿಗೆ ನೆಮ್ಮದಿ ಮತ್ತು ಆತ್ಮಶಾಂತಿ ಸಿಗುತ್ತದೆ ಎನ್ನುವುದು ಅವರ ಅಪಾರ ನಂಬಿಕೆಯಾಗಿತ್ತು.

## ➤ ಸತ್ಯ :-

* ಸತ್ಯದ ಹಾದಿ ಸುಲಭದ ಹಾದಿಯಲ್ಲ. ದಿನಕ್ಕೆ ನೂರು ಸುಳ್ಳುಗಳನ್ನು ಹೇಳುವ ನಮಗೂ ಗಾಂಧೀಜಿಯವರಿಗೂ ಅಜಗಜಾಂತರ ವ್ಯತ್ಯಾಸವಿದೆ. ಸತ್ಯದ ಪರೀಕ್ಷೆಯಲ್ಲಿ ಹೆಚ್ಚಿನ ಆಸೆಯವನ್ನು ಇಟ್ಟುಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು ಮತ್ತು ಮಾದರಿಯಾಗಿಟ್ಟರು. ಗಾಂಧೀಜಿಯವರು ತಪ್ಪುಗಳನ್ನು ಮಾಡೇ ಇಲ್ಲ ಎಂದೇನಿಲ್ಲ. ಗಾಂಧೀಜಿಯವರು ತಪ್ಪುಗಳನ್ನು ಮಾಡಿದ್ದಾರೆ ಹಾಗೆಯೇ ಅವುಗಳನ್ನು ತಿದ್ದುಕೊಂಡು ಪಾಠವನ್ನು ಕಲಿತುಕೊಂಡಿದ್ದಾರೆ. ಮತ್ತು ಮುಂದೆ ಎಂದು ಅವರು ಸುಳ್ಳು ಹೇಳಲಿಲ್ಲ. ಸತ್ಯವನ್ನೇ ಅನುಸರಿಸಿದ್ದಾರೆ. ತಮ್ಮ ಮೇಲೆಯೇ ಪ್ರಯೋಗಿಸಿಕೊಂಡು ಅವರು ಸತ್ಯವನ್ನು ಸಾಧಿಸಲು ಪ್ರಯತ್ನಿಸಿದ್ದರು ಹಾಗೂ ಗೆದ್ದಿದ್ದಾರೆ.

* ಗಾಂಧೀಜಿಯವರು ತಮ್ಮಲ್ಲಿರುವ ಅಂಜಿಕೆ, ಅಳುಕು, ಕೆಟ್ಟತನ ಮತ್ತು ಅರಕ್ಷಣೆಗಳನ್ನು ಬಗೆಹರಿಸಿಕೊಳ್ಳುವುದು. ಮತ್ತು ಬಗೆಹರಿಸಿಕೊಂಡದ್ದು ಒಂದು ಯುದ್ಧದಂತಾಗಿತ್ತೆಂದಿದ್ದಾರೆ. ನಮ್ಮ ಜೀವನದಲ್ಲಿ ನಾವು ನಮ್ಮಲ್ಲಿರುವ ಕೆಲವು

ಗುಣಗಳನ್ನು ಹೊಡೆದೋಡಿಸಬೇಕಾದರೆ ಅದು ತುಂಬಾ ಕಷ್ಟದ ವಿಷಯ. ಅದಕ್ಕೆ ಸಾಕಷ್ಟು ಪರಿಶ್ರಮಬೇಕು. ಅಬಯ ಅಥವಾ ಅಚಲವಾದ ಮನಸ್ಸಿರಬೇಕು. ಸ್ಥಿರವಾದ ನಂಬಿಕೆ ಹಾಗೂ ಗುರಿ ಇರಬೇಕು. ಹಾಗೆ ಗಾಂಧೀಜಿಯವರು ಸತ್ಯದೆಡೆಗೆ ಬರಲು ತಮ್ಮ ಗುಣಗಳನ್ನು ಬದಲಿಸಿಕೊಂಡಿದ್ದಾರೆ.

* 'ದೇವರೇ ಸತ್ಯ' ಎಂದು ಹೇಳುವುದರ ಮೂಲಕ ಗಾಂಧೀಜಿಯವರು ತಮ್ಮ ನಂಬಿಕೆಯ ಸಾರಾಂಶವನ್ನು ತಿಳಿಸಿದ್ದಾರೆ. ನಾವು ಮನುಷ್ಯರು ಮೂರ್ಖರು ನಮ್ಮ ಮೇಲೆ ನಮಗೆ ನಂಬಿಕೆ ಇರುವುದಿಲ್ಲ. ಅಂತಹದರಲ್ಲಿ ಇನ್ನು ಪಕ್ಕದಲ್ಲಿ ಇರುವವರನ್ನಂತು ನಂಬುವುದೇ ಇಲ್ಲ. ನಾವು ದೇವರನ್ನು ಅತಿಯಾಗಿ ನಂಬುತ್ತೇವೆ. ಆದರೆ ದೇವರು ಇದ್ದಾರೆಯೋ ಇಲ್ಲವೋ ತಿಳಿದಿಲ್ಲ ಆದರೂ ಯಥೇಚ್ಛವಾಗಿ ನಂಬುತ್ತೇವೆ. ಇದು ಗಾಂಧೀಜಿಯವರಿಗೆ ಅರ್ಥವಾದಾಗ ಅವರು 'ದೇವರೇ ಸತ್ಯ' ಎನ್ನುವುದನ್ನು ಬಿಟ್ಟು 'ಸತ್ಯವೇ ದೇವರು' ಎಂದು ಬದಲಿಸಿದ್ದಾರೆ.

* ಸತ್ಯ ಹೇಳುವುದರಿಂದ ಮನುಷ್ಯ ಎಂದಿಗೂ ಟೀಕೆ ಪ್ರಶ್ನೆಗೆ ಗುರಿಯಾಗುವುದಿಲ್ಲ. ಸತ್ಯ ಮನುಷ್ಯನ ವ್ಯಕ್ತಿತ್ವವನ್ನು ಸೃಷ್ಟಿಸುವುದಲ್ಲ, ಒಳ್ಳೆಯ ಗುಣವನ್ನು ಬೆಳೆಸಿಕೊಳ್ಳುವುದರಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಸತ್ಯ ಮನುಷ್ಯನ ಜೀವನದ ಬಹು ಮುಖ್ಯ ಹಾಗೂ ದೊಡ್ಡ ಅಂಗವಾಗಿದೆ.

## ➤ ಅಹಿಂಸೆ :-

* ಮಹಾತ್ಮ ಗಾಂಧೀಜಿಯವರು ಅಹಿಂಸಾ ತತ್ವವನ್ನು ಸೃಷ್ಟಿ ಮಾಡಲ್ಲ ಆದರೂ ಅಹಿಂಸಾ ತತ್ತ್ವವನ್ನು ರಾಜಕೀಯ ಕ್ಷೇತ್ರದಲ್ಲಿ ಬಳಸಿದವರಲ್ಲಿ ಪ್ರಥಮರಾಗಿದ್ದರು. ಭಾರತದ ಧಾರ್ಮಿಕ ಚಿಂತನೆಯಲ್ಲಿ ಹಿಂಸೆ ಮತ್ತು ಸೇಡುಗಳು ಇಲ್ಲದೆ ಇರುವ ಸುದೀರ್ಘ ಇತಿಹಾಸವನ್ನು ಹೊಂದಿದೆ. ಹೀಗೆ ಹಿಂಸೆ ಮತ್ತು ಸೇಡುಗಳು ಇಲ್ಲದೇ ಇರುವ ಕಾರಣದಿಂದಾಗಿಯೇ ಇದು ಹಿಂದೂ, ಬೌದ್ಧ, ಜೈನ, ಯಹೂದಿ ಮತ್ತು ಕ್ರಿಶ್ಚಿಯನ್ ಎಲ್ಲರ ಜೀವನ ಜೀವಂತವಾಗಿದೆ.

* ಇತಿಹಾಸದ ಉದ್ದಕ್ಕೂ ಸತ್ಯ ಮತ್ತು ಅಹಿಂಸೆ. ಪ್ರೇಮದ ಮಾರ್ಗಗಳೇ ಗೆದ್ದಿವೆ. ಪ್ರಜಾಪೀಡಕರು ಮತ್ತು ಕೊಲೆಗಾರರು. ಹಿಂಸಾಚಾರಕರು ಒಮ್ಮೆ ಮಾತ್ರ ಗೆಲ್ಲುತ್ತಾರೆ. ಅದು ಕ್ಷಣಿಕ ಮಾತ್ರ ಆದರೆ ಅಂತಿಮವಾಗಿ ಸತ್ಯ, ಅಹಿಂಸೆ ಮತ್ತು ಪ್ರೇಮದ ಮಾತು ಹಾಗೂ ಮಾರ್ಗಗಳೇ, ಗೆಲುತ್ತದೆ ಮತ್ತು ಗೆಲುತ್ತವೆ. ಅವು ಸ್ಪಷ್ಟವಾಗಿರುತ್ತವೆ.

* ದೇಶದ ಎಲ್ಲಾ ಮನುಷ್ಯರು ಸೇಡುಗೆ-ಸೇಡು, ಮುಯ್ಯಿಗೆ-ಮುಯ್ಯಿ ಅಂತ ದ್ವೇಷವನ್ನು ಬೆಳೆಸಿಕೊಳ್ಳುತ್ತಲೇ ಹೋದರೆ ಇಡೀ ಪ್ರಪಂಚವೇ ಸರ್ವನಾಶವಾಗುತ್ತದೆ.

* ಮಹಾತ್ಮ ಗಾಂಧೀಜಿಯವರ ಪ್ರಕಾರ ಮನುಷ್ಯ ತನ್ನ ಪ್ರಾಣವನ್ನು ಕೊಡಲು ಹಲವಾರು ಕಾರಣಗಳು ಇರಬಹುದು ಆದರೆ ಬೇರೆಯವರ ಪ್ರಾಣವನ್ನು ತೆಗೆಯಲು ಯಾವ ಕಾರಣವು ಇರುವುದಿಲ್ಲ ಎಂದು ಹೇಳಿದ್ದಾರೆ.

* ಅಹಿಂಸಾತ್ಮಕವಾಗಿರುವಂತಹ ಪ್ರಪಂಚವನ್ನು ಸರ್ಕಾರ, ಪೋಲಿಸ್ ಮತ್ತು ಸೇನೆಗಳೆಲ್ಲವುಗಳಲ್ಲಿಯೂ ರೂಢಿ ಅಥವಾ ಕೂಡ ಈ ತತ್ವಗಳನ್ನು ಅಳವಡಿಸಬೇಕು ಮತ್ತು ಅಳವಡಿಸಿಕೊಳ್ಳಬೇಕು ಎಂಬ ಉದ್ದೇಶವನ್ನು ಹೊಂದಿದ್ದರು. ಅಹಿಂಸಾತ್ಮಕ ವಾದ-ವಿವಾದವು ಕೊನೆಯ ತನಕ ಒಯ್ಯಲು ಗಾಂಧೀಜಿಯವರು ಹಿಂಜರಿಯಲಿಲ್ಲ.

* ಯುದ್ಧದ ವಿಚಾರಗಳು, ಯುದ್ಧಗಳು ಹಾಗೂ ಸೇಡುಗಳು ಒಬ್ಬ ವ್ಯಕ್ತಿಯನ್ನು ಸ್ಪಷ್ಟವಾಗಿ, ಸರಳವಾಗಿ ಎಲ್ಲಾವು ನನ್ನದೇ, ನಾನೇ ಸರ್ವಾಧಿಕಾರಿ ಎನ್ನುವ ಅಹಂಕಾರ ಕಡೆಗೆ ಕರೆದೊಯ್ಯುತ್ತದೆ ಹಾಗೂ ನಾನೇ ಶ್ರೇಷ್ಠ. ನನ್ನಲ್ಲಿಯೇ ಸರ್ವಶಕ್ತಿ ಇದೆ ಎನ್ನುವ ಕೆಟ್ಟ ಯೋಚನೆ, ದುರಾಲೋಚನೆ ವ್ಯಕ್ತಿಯನ್ನು ಆವರಿಸುತ್ತದೆ. ಆದರೆ ಅಹಿಂಸೆ ಮತ್ತು ಅಹಿಂಸೆಯ ವಿಚಾರಗಳು ಒಬ್ಬ ವ್ಯಕ್ತಿಯನ್ನು ಶುದ್ಧ ಪ್ರಜಾಪ್ರಭುತ್ವದತ್ತ ಕರೆದೊಯ್ಯುತ್ತವೆ.

* ಭಯ - ಭೀತಿಯಿಂದ, ಹೆದರಿಕೆಗಳಿಂದ, ಹಿಂಸೆಗಳಿಂದ ಹುಟ್ಟುವ ಅಧಿಕಾರಕ್ಕಿಂತಲೂ, ಪ್ರೇಮ, ಸತ್ಯ ಮತ್ತು ಅಹಿಂಸೆಗಳ ಆಧಾರದ ಮೇಲೆ ಹುಟ್ಟುವ ಅಧಿಕಾರವು ಸಾವಿರಪಟ್ಟು ಪರಿಣಾಮಕಾರಿಯಾಗಿರುತ್ತದೆ ಹಾಗೂ ಕೊನೆಯವರೆಗೂ ಉಳಿದಿರುತ್ತದೆ. ಅಹಿಂಸೆಯನ್ನು ಕೇವಲ ವ್ಯಕ್ತಿಗಳು ಮಾತ್ರ ಅಳವಡಿಸಿಕೊಳ್ಳಲು ಸಾಧ್ಯ. ವ್ಯಕ್ತಿಗಳು ತುಂಬಿರುವಂತಹ ರಾಷ್ಟ್ರಗಳಿಂದ ಎಂದಿಗೂ ಸಾಧ್ಯವಿಲ್ಲ ಎನ್ನುವುದು ನಂಬಲು ಅಸಾಧ್ಯವೆನಿಸುತ್ತದೆ.

* ಅಹಿಂಸಾತ್ಮಕ ಸಂದರ್ಭಗಳಲ್ಲಿಯೂ ಸಹ ಪೋಲಿಸರ ಲಾಟಿಯ ಅವಶ್ಯಕತೆ ಇರುತ್ತದೆ ಏಕೆಂದರೆ ಯಾವಾಗ ಜನರು ಹೋರಾಟ, ಮುಷ್ಕರ, ಧರಣಿಗಳನ್ನು ನಡೆಸುತ್ತಿರುತ್ತಾರೋ ಆವಾಗ ಅಲ್ಲಿ ಹಿಂಸಾತ್ಮಕ ಜಗಳಗಳು ವ್ಯಕ್ತಿ-ವ್ಯಕ್ತಿಗಳ ನಡುವೆ ನಡೆಯುವುದನ್ನು ತಡೆಯಲು ಅವರನ್ನು ಭಯಗೊಳಿಸಲು ಲಾಟಿಯ ಅವಶ್ಯಕತೆ ಇದೆ.

* ನಮ್ಮನ್ನು ಅಥವಾ ಮನುಷ್ಯರನ್ನು, ಮನುಷ್ಯಕುಲವನ್ನು ರಕ್ಷಿಸಲು ಯೋಗ್ಯವಲ್ಲದ ಶಸ್ತ್ರಾಸ್ತ್ರಗಳನ್ನು ನಾವು ನಮ್ಮಿಂದ ದೂರವಿಡಬೇಕು. ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಳ್ಳಲು ಹೆದರಿ ಅಥವಾ ವಿರೋಧಗಳನ್ನು ಕಟ್ಟಿಕೊಳ್ಳಲು ಅಶಕ್ತರಾದವರು ಸತ್ಯಾಗ್ರಹ, ಅಹಿಂಸೆಯ ಆಂದೋಲನದೆಡೆಗೆ ಬರುವುದು ಗಾಂಧೀಜಿಯವರಿಗೆ ಇಷ್ಟವಿರಲಿಲ್ಲ ಏಕೆಂದರೆ ಸತ್ಯ ಮತ್ತು ಅಹಿಂಸೆಯ ಆಂದೋಲನದ ಕಡೆಗೆ ಬರುವವರು ಅವುಗಳನ್ನು ಇಷ್ಟಪಟ್ಟು ಮನಸಾರೆ ಒಪ್ಪಿಕೊಂಡು ಬರುವಂತವರಾಗಿರಬೇಕು ಎನ್ನುವ ಭಾವನೆ ಗಾಂಧೀಜಿಯವರದ್ದಾಗಿತ್ತು.

* ಒಂದು ಕಾಲದಲ್ಲಿ ಜನರು ಗಾಂಧೀಜಿಯವರ ಮಾತನ್ನು ಕೇಳುತ್ತಿದ್ದರು ಮತ್ತು ಪರಿಪಾಲಿಸುತ್ತಿದ್ದರು. ಏಕೆಂದರೆ ಅವರು ಅಶಕ್ತರಾಗಿದ್ದರು ಹಾಗೂ ಅವರ ಬಳಿ ಶಸ್ತ್ರಾಸ್ತ್ರಗಳು ಇರಲಿಲ್ಲ ಆಗ ಅಹಿಂಸೆ, ಸತ್ಯಾಗ್ರಹ, ವ್ರತಾಚರಣೆಗಳನ್ನೇ ಶಸ್ತ್ರಾಸ್ತ್ರಗಳನ್ನಾಗಿ ಬಳಸುತ್ತಿದ್ದರು. ಆದರೆ ಬ್ರಿಟಿಷರು ಭಗತ್‌ಸಿಂಗ್, ಸುಖ್‌ದೇವ್, ಉಧಮ್ ಸಿಂಗ್ ಮತ್ತು ರಾಜ್‌ಗುರುರವರನ್ನು ನೇಣಿಗೆ ಹಾಕುವ ಸಂದರ್ಭದಲ್ಲಿ ಯಾರೂ ಕೂಡ ಗಾಂಧೀಜಿಯವರೊಂದಿಗೆ ಕೈ ಜೋಡಿಸಲಿಲ್ಲ, ಯಾರೊಬ್ಬರು ಪ್ರತಿಭಟಿಸಲು ಬರಲಿಲ್ಲ.

ಏಕೆಂದರೆ ಅವರ ಬಳಿ ಶಸ್ತ್ರಾಸ್ತ್ರಗಳಿದ್ದವು ಹಾಗೂ ಹಿಂಸಾಚಾರವನ್ನು ಅನುಸರಿಸಲು ಮುಂದಾಗಿದ್ದರು ಮತ್ತು ಹಿಂಸಾಚಾರವನ್ನು ಕೈಗೆತ್ತಿಕೊಂಡು ಅನುಸರಿಸಿದ್ದರು.

## ➤ ಧರ್ಮಶ್ರದ್ಧೆ :-

* ಗಾಂಧೀಜಿಯವರು ಹಿಂದೂಧರ್ಮದಲ್ಲಿ ಜನಿಸಿದವರು. ಅವರು ತಮ್ಮ ತತ್ವಗಳಲ್ಲಿ ಬಹಳಷ್ಟನ್ನು ಹಿಂದೂ ಧರ್ಮದಿಂದ ಪಡೆದುಕೊಂಡಿದ್ದರು ಹಾಗೂ ತಮ್ಮ ಜೀವನದ ಉದ್ದಕ್ಕೂ ಹಿಂದೂಧರ್ಮವನ್ನು ಪರಿಪಾಲಿಸಿದ್ದಾರೆ.

* ಗಾಂಧೀಜಿಯವರು ಒಬ್ಬ ಸಾಮಾನ್ಯ ಹಿಂದುವಾಗಿ, ಬೇರೆ ಯಾವ ಜಾತಿ, ಧರ್ಮಗಳನ್ನು ಕೀಳಾಗಿ ನೋಡಲಿಲ್ಲ. ಎಲ್ಲಾ ಧರ್ಮಗಳು ಒಂದೇ ಎಂದು ಸಮಾನ ದೃಷ್ಟಿಯಲ್ಲಿ ಕಂಡಿದ್ದಾರೆ. ಬೇರೊಂದು ಧರ್ಮಗಳಿಗೆ ಅವರು ಯಾವತ್ತೂ ಮತಾಂತರಗೊಳ್ಳಲಿಲ್ಲ. ಮತಾಂತರಗೊಳಗಾಗುವ ಅಥವಾ ಮತಾಂತರಗೊಳ್ಳುವ ಎಷ್ಟೇ ಅವಕಾಶಗಳಿದ್ದರೂ ಅವರ ಎಂದಿಗೂ ಬೇರೆ ಧರ್ಮಕ್ಕೆ ಮತಾಂತರಗೊಳ್ಳಲಿಲ್ಲ. ಅಂತಹ ಅವಕಾಶಗಳನ್ನು ದೂರ ತಳ್ಳಿದರು.

* ಎಲ್ಲಾ ಧರ್ಮ ಅಥವಾ ಪ್ರತಿಯೊಂದು ಧರ್ಮದ ಸಾರಾಂಶದಲ್ಲಿ ಸತ್ಯ ಮತ್ತು ಪ್ರೀತಿ, ಒಳ್ಳೆಯತನ, ಇರುವುದೆಂದು ಗಾಂಧಿಯವರು ನಂಬಿದ್ದರು, ಹಿಂದೂ ಧರ್ಮ, ಕ್ರೈಸ್ತ ಧರ್ಮ ಸೇರಿದಂತೆ ಎಲ್ಲಾ ಧರ್ಮಗಳಿರುವ ದುಷ್ಟಾಚಾರ, ಕೆಟ್ಟ ಯೋಚನೆಗಳನ್ನು ಗಾಂಧೀಜಿಯವರು ಪ್ರಶ್ನಿಸುತ್ತಾರೆ. ಗಾಂಧೀಜಿಯವರು ಧರ್ಮಗಳಲ್ಲಿರುವ ಕೆಟ್ಟತನಗಳನ್ನು ಹೊಡೆದು ಹಾಕಿ, ಸಾಮಾಜಿಕ

ಸುಧಾರಣೆಗೆ ಸಂಬಂಧಿಸಿದಂತೆ ಎಂದಿಗೂ ಧಣಿವು ಎನ್ನದ ಸಮರ್ಥ ವ್ಯಕ್ತಿಯಾಗಿದ್ದರು.



ಗಾಂಧೀಜಿ ಸ್ಮೃತಿ

Co-ordinator IQAC
G. P. Porwal Arts, Comm & V. V. Salimath
Science College, SINDGI-586128. Dt.Vijayapur



ಗಾಂಧೀಜಿಯವರು ನಡೆಸುತ್ತಿರುವ ಚಳುವಳಿ



ಗಾಂಧೀಜಿಯವರು ನಡೆಸುತ್ತಿರುವ ಸತ್ಯಾಗ್ರಹ

Head
Dept. of Kannada
G.P.P. Arts, Commerce & V.V.S. Science
College, SINDAGI-586128.

Principal,
G. P. Porwal Arts, Comm &
V. V. Salimath Sc. College
SINDGI-586128. College Code: 5234



ಸ್ವಾಮಿ ವಿವೇಕಾನಂದ

# ೨. ಸ್ವಾಮಿ ವಿವೇಕಾನಂದ

ಸ್ವಾಮಿ ವಿವೇಕಾನಂದರು ಒಬ್ಬ ಆಧ್ಯಾತ್ಮಿಕ ನಾಯಕ ಮತ್ತು ಸಮಾಜ ಸುಧಾರಕರಾಗಿದ್ದಾರೆ. ಇವರ ಮೊದಲ ಹೆಸರು ನರೇಂದ್ರನಾಥ ದತ್ತ. ಇವರ ತಂದೆ ವಿಶ್ವನಾಥದತ್ತ. ತಾಯಿ ಭುವನೇಶ್ವರಿ ದೇವಿ. ಇವರು ೧೮೬೩ನೇ ಜನವರಿ ೧೨ ರಂದು ಕೋಲ್ಕತ್ತಾದಲ್ಲಿ ಜನಿಸಿದರು. ಇವರು ಭಾರತದ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಶಾಲಿ ತತ್ವಜ್ಞಾನಿಗಳಲ್ಲಿ ಒಬ್ಬರು. ಇವರು ಬೇಲೂರು ಮಠ, ರಾಮಕೃಷ್ಣಮಠ ಮತ್ತು ರಾಮಕೃಷ್ಣ ಮಿಷನ್‌ನ ಸಂಸ್ಥಾಪಕರು. ಇವರ ಜನ್ಮದಿನವನ್ನು "ರಾಷ್ಟ್ರೀಯ ಯುವ ದಿನ" ಎಂದು ಆಚರಿಸುತ್ತೇವೆ. ಇವರು ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾಗಿದ್ದರು. ಇವರು "ರಾಜಯೋಗ", "ಕರ್ಮಯೋಗ" ಮತ್ತು "ಜ್ಞಾನಯೋಗ" ಎಂಬ ಕೃತಿಗಳನ್ನು ರಚಿಸಿದ್ದಾರೆ. ನಿರ್ಭಯತೆ, ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲ ದೃಷ್ಟಿಯ ಸಂಕೇತವಾಗಿ ಇವರು ಪರಿಗಣಿತರಾಗಿದ್ದರು. ಇವರು ಒಬ್ಬ ಹಿಂದೂ ಸನ್ಯಾಸಿಯಾಗಿದ್ದರು.

## ಅದ್ವೈತ ಸಿದ್ಧಾಂತದ ಉಪಯುಕ್ತತೆ:

* ವಿವೇಕಾನಂದರು ಕೇವಲ ರಾಮಕೃಷ್ಣ ಪರಮಹಂಸರ ಶಿಷ್ಯರಾಗದೆ ತಮ್ಮದೇ ಆದ ಶೈಲಿಯಲ್ಲಿ ದೊಡ್ಡ ಚಿಂತಕರಾಗಿ ಹೆಸರನ್ನು ಗಳಿಸಿದ್ದಾರೆ. ಇವರ ಮುಖ್ಯವಾದ ಕೊಡುಗೆಯೆಂದರೆ ಕೇವಲ ತಾತ್ವಿಕವಾಗಿ ಉಚ್ಚ ತತ್ವಜ್ಞಾನ ಮಾತ್ರವಲ್ಲದೆ.

ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿಯಿಂದಲೂ ಉಪಯೋಗ ಎನ್ನುವುದನ್ನು ತೋರಿಸಿಕೊಟ್ಟರು. ಅವರ ಅನಿಸಿಕೆಯಂತೆ, ರಾಮಕೃಷ್ಣರಿಂದ ಪಡೆದ ಮುಖ್ಯ ಭೋಧನೆಗಳಲ್ಲಿ ಒಂದೆಂದರೆ ಎಲ್ಲರಲ್ಲಿಯೂ ದೇವರಿದ್ದಾನೆ ಎನ್ನುವುದು.

* ವಿವೇಕಾನಂದರು ಎಲ್ಲರಲ್ಲಿಯೂ ದೇವರಿದ್ದಾನೆ ಎನ್ನುವುದನ್ನು ಮಂತ್ರವನ್ನಾಗಿಸಿಕೊಂಡು ಮತ್ತು ಇವರ ದರಿದ್ರ ನಾರಾಯಣ ಸೇವೆ ಎಂಬ ತತ್ತ್ವಕ್ಕೆ ದಾರಿ ಮಾಡಿಕೊಂಡರು. ಈ ತತ್ತ್ವದ ಪ್ರಕಾರ ವಿವೇಕಾನಂದರು ಬಡ ಜನರ ಸೇವೆಯಲ್ಲಿಯೇ ದೇವರ ಸೇವೆಯನ್ನು ಮಾಡುವ ದಾರಿಯನ್ನು ಪಾಲಿಸಿದ್ದಾರೆ.

* ಎಲ್ಲರಲ್ಲಿಯು ದೇವರಿದ್ದಾನೆ ಎಂದ ಮೇಲೆ ಎಲ್ಲರೂ ಸಮಾನರೇ ಹಾಗೆಂದ ಮೇಲೆ ಯಾರೂ ಮೇಲಾಗುವುದಿಲ್ಲ, ಯಾರೂ ಕೀಳಾಗುವುದಿಲ್ಲ. ಕೆಲವರಿಗೆ ಮಾತ್ರ ಏಕೆ ಬೆಲೆ ಹೆಚ್ಚು ಬರಬೇಕು. ಎಂಬ ಪ್ರಶ್ನೆ ಅವರಲ್ಲಿ ಮೂಡಿತು.

* ವಿವೇಕಾನಂದರ ಕೊನೆಯ ತೀರ್ಮಾನವೆಂದರೆ ಭಕ್ತನು ಮೋಕ್ಷವನ್ನು ಅನುಭವಿಸಿದಾಗ ನಮ್ಮಲ್ಲಿರುವ ಎಲ್ಲಾ ಭೇದಗಳೂ ಮಾಯವಾಗಿ, ಉಳಿಯುವುದೆಂದರೆ ಬ್ರಹ್ಮನೊಂದಿಗೆ ತಮ್ಮ ಐಕ್ಯವನ್ನು ಅರಿಯುದು ಮತ್ತು ಕೆಳತುಳಿಯಲ್ಪಟ್ಟ ಜನರ ಬಗ್ಗೆ ಸಂತಾಪ ಮತ್ತು ಅಂತಹ ಜನರಿಗೆ ಸಹಾಯ ಮಾಡುವ ನಿರ್ಧಾರ ವಿವೇಕಾನಂದರದ್ದಾಗಿತ್ತು.

### ➢ ವಿಶ್ವ ಪರ್ಯಟನ :-

* ವಿವೇಕಾನಂದರು ಭಾರತದ ತತ್ತ್ವಜ್ಞಾನ, ಯೋಗ, ವೇದಾಂತ ಇವೆಲ್ಲವನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಚಾರ ಮಾಡಿದರು,

ಅವರ ಶ್ರೀರಾಮಕೃಷ್ಣ ಪರಮಹಂಸರ ಬಳಿಯ ಮನೋಭಾವದ ಕಡೆಗೆ ಮುಖ ಮಾಡಿದರು. ಅವರು ಸನ್ಯಾಸಿಗಳಾಗಿ ದೇವರಸೇವೆ-ಯಪುಗಳನ್ನು ಹೇಗೆ ಮಾಡಬಹುದು ಎಂದು ನಿರೂಪಿಸಿದರು.

* ವಿವೇಕಾನಂದರು ಭಾರತದ ಪ್ರವಾಸ ಕೈಗೊಳ್ಳುತ್ತಾರೆ. ಭಾರತದ ಉಪಖಂಡದಲ್ಲಿ ಬ್ರಿಟೀಷರ ಪ್ರಿರತ್ತುಗಳನ್ನು ಅಧ್ಯಯನ ಮಾಡಿದರು. ನಂತರ ಅವರು ಅಮೇರಿಕಾಕ್ಕೆ ಪ್ರವಾಸ ಕೈಗೊಂಡರು. ೧೮೯೩ರಲ್ಲಿ ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾರತೀಯರ ಧರ್ಮವನ್ನು ಎತ್ತಿ ಹಿಡಿದರು. ದೇಶ ವಿದೇಶಗಳಲ್ಲಿ ಹಿಂದೂ ಧರ್ಮದ ತತ್ವವನ್ನು ಭೋಧಿಸಿದರು.

* ವಿವೇಕಾನಂದರ ನಂಬಿಕೆಗಳಲ್ಲಿ ಮುಖ್ಯವಾದುದು ನಮ್ಮಲ್ಲಿ ಎಲ್ಲರೂ ಮುಕ್ತರಾಗುವವರೆಗೆ ಯಾರೊಬ್ಬರೂ ಮುಕ್ತರಾಗಲಾರರು ಎನ್ನುವುದು. ವೈಯಕ್ತಿಕ ಮುಕ್ತಿಯ ಆಸೆಯನ್ನು ಬಿಟ್ಟು ಎಲ್ಲರ ಮುಕ್ತಿಗಾಗಿ ಶ್ರಮಿಸುವವನೇ ಅವರ ದೃಷ್ಟಿಯಲ್ಲಿ ಪ್ರಬುದ್ಧ ವ್ಯಕ್ತಿ. ಇವರು ಧರ್ಮ ಹಾಗೂ ಸರ್ಕಾರದ ನಡುವೆ ಕಟ್ಟುನಿಟ್ಟಾದ ಅಂತರವನ್ನು ಇಟ್ಟುಕೊಳ್ಳಬೇಕೆಂದು ಮನವಿ ಮಾಡಿದರು. ಸಾಮಾಜಿಕ ಕಟ್ಟಳೆಗಳು ಧರ್ಮದ ಮೂಲಕ ರೂಪುಗೊಂಡಿರುತ್ತವೆ ಆದರೂ ಸರ್ಕಾರಿ ಕೆಲಸಗಳಲ್ಲಿ ಯಾವುದೇ ಒಂದು ಧರ್ಮಕ್ಕೆ ಪ್ರಾಮುಖ್ಯತೆ ಇರಬಾರದು. ಎಂದು ಇವರ ನಂಬಿಕೆಯಾಗಿತ್ತು.



ವಿಶ್ವ ಪರ್ಯಟನೆ



ಚಿಕ್ಯಾಗೋ ಸಮ್ಮೇಳನ

## ಸ್ವದೇಶ ಮಂತ್ರ :-

* ವಿವೇಕಾನಂದರು ಭಾರತದ ನಿವಾಸಿಗಳಿಗೆ ಹೀಗೆ ಹೇಳುತ್ತಿದ್ದರು. ಏನೆಂದರೆ ನಮ್ಮ ದೇಶದ ಸ್ತ್ರೀಯರೇ ನಮಗೆ ಆದರ್ಶವಾಗಿದ್ದಾರೆ. ನಮ್ಮ ದೇಶದ ಸೀತಾ, ಸಾವಿತ್ರಿ, ದಮಯಂತಿಯರು ನಾವು ಪೂಜಿಸುವುದು ಜಗದೀಶ್ವರ, ಚೂಡಾಮಣಿ, ಉಮಾವಲ್ಲಭ ಶಂಕರ ಎಲ್ಲರೂ ಒಂದೇ. ನಮ್ಮ ವಿವಾಹ, ನಮ್ಮ ಐಶ್ವರ್ಯ, ನಮ್ಮ ಜೀವನ ಕೇವಲ ಆಡಂಬರ-ಅಲಂಕಾರ, ಹೊರ ಜಗತ್ತಿಗೆ ತೋರಿಸುವುದಕ್ಕಲ್ಲ ಮತ್ತು ವ್ಯಕ್ತಿಗತ ಸುಖಕ್ಕೂ ಅಲ್ಲ. ನಮ್ಮ ಜನ್ಮವಿರುವುದು ಜಗನ್ಮಾತೆ ಅಂದರೆ ನಮಗೆ ಆಶ್ರಯ ನೀಡಿದ ಭೂಮಾತಾಯಿಗಾಗಿ, ದೇಶಕ್ಕಾಗಿ ಹೋರಾಡುವುದಕ್ಕಾಗಿ ಎಂದಿದ್ದಾರೆ.

* ಮೂರ್ಖರು, ಶಿಕ್ಷಣವನ್ನು ಹೊಂದಿಲ್ಲದಿರುವವರು, ದರಿದ್ರರು, ಚಂಡಾಲರು, ಕೂಲಿಗಾರರು, ಅಂತ್ಯಜರು ಮತ್ತು ಚಮ್ಮಾರರು. ಇವರುಗಳೆಲ್ಲರೂ ನಮ್ಮ ರಕ್ತಬಂಧುಗಳಾದ ಸಹೋದರರ ರೂಪದಲ್ಲೇ ಇರುತ್ತಾರೆ. ವೀರರು, ಶೂರರುಗಳಾದ ನಾವುಗಳು ಯಾವುದೇ ರೀತಿಯ ಭಯವೂ ಪಡದೆ ಭಾರತೀಯರಾದ ನಾವು ಯಾವತ್ತೂ ಹೆಮ್ಮೆ, ಉತ್ಸಾಹ-ಉಲ್ಲಾಸದಿಂದ ಸಾರಿ ಸಾರಿ ಹೇಳಬೇಕು. ಭಾರತೀಯರು ನಾವು. ಭಾರತೀಯರೆಲ್ಲ ನಮ್ಮ ಸಹೋದರರು ಎಂದು ಕೂಗಿ ಕೂಗಿ ಹೇಳಿ ಎಂದಿದ್ದಾರೆ.

* ಭಾರತ ಭೂಮಿಯೇ ನಮ್ಮ ಪರಂಧಾಮ, ಭಾರತದ ಶುಭವೇ ನಮ್ಮ ಶುಭ ಎಂದು ಹಗಲು ರಾತ್ರಿ ಪ್ರಾರ್ಥನೆ ಮಾಡಿ ಎಂದಿದ್ದಾರೆ. ಗೌರಿಯ ಪತಿಯಾದ ಈಶ್ವರನೇ, ಜಗತ್ತಿಗೆ ಜನ್ಮವನ್ನು ನೀಡಿದ ಜಗನ್ಮಾತೇ ನಮಗೆ ಶಕ್ತಿ, ಪೌರುಷವನ್ನು ಕರುಣಿಸು, ಸರ್ವರಿಗೂ ಶಕ್ತಿಯನ್ನು ದಯಪಾಲಿಸುವ ಸರ್ವಶಕ್ತಿಶಾಲಿನಿಯೇ ನಮ್ಮ

ದೌರ್ಬಲ್ಯವನ್ನು ಸುಟ್ಟು ಹಾಕಿ, ಕೆಟ್ಟತನವನ್ನು ಹೋಗಲಾಡಿಸು, ನಮಗೆ ದೌರ್ಬಲ್ಯವನ್ನು ನೀಡಬೇಡ, ನಮಗೆ ಶಕ್ತಿಯನ್ನು, ವೀರತ್ವವನ್ನು ಧಾರೆ ಎರೆ ಎಂದು ಪ್ರಾರ್ಥಿಸಬೇಕು ಎಂದಿದ್ದಾರೆ.

* "ಭಾರತೀಯರು - ನಮ್ಮ ಸೋದರರು, ಭಾರತೀಯರು - ನಮ್ಮ ಪ್ರಾಣ, ಭಾರತೀಯ ದೇವ ದೇವತೆಗಳೆಲ್ಲರೂ - ನಮ್ಮ ದೇವರು, ಭಾರತೀಯ ಸಮಾಜ - ನಮ್ಮ ಬಾಲ್ಯದ ತೊಟ್ಟಿಲು, ತಾರುಣ್ಯದ ನಂದನವನ, ವೃದ್ಧಾಪ್ಯದ ವಾರಾಣಾಸಿ" ಎಂದು ಘೋಷಿಸಿದ್ದಾರೆ.

## ➤ ಸ್ವಾಮಿ ವಿವೇಕಾನಂದರ ಹುಮ್ಮಸ್ಸು ನೀಡುವ ಕೆಲವು ಉಲ್ಲೇಖಗಳು:

* "ಏಳು, ಎದ್ದೇಳು ಗುರಿ ಮುಟ್ಟುವ ತನಕ ನಿಲ್ಲದಿರು"
* "ಶಕ್ತಿ, ಧೈರ್ಯವೇ ಜೀವನ, ಹೇಡಿತನವೇ ಮರಣ".
* "ಅಪಾಯಗಳನ್ನು ಎದುರಿಸು, ಗೆದ್ದರೆ ಮುಂದೆ ಹೋಗುವೆ, ಸೋತರೆ ಪಾಠ ಕಲಿಯುವೆ."
* "ಎಲ್ಲಿಯ ವರೆಗೂ ನೀನು ನಿನ್ನನ್ನು ನಂಬುವುದಿಲ್ಲವೋ, ಅಲ್ಲಿಯವರೆಗೂ ದೇವರನ್ನೂ ನಂಬಬೇಡ."
* "ಎಲ್ಲಾ ಶಕ್ತಿಗಳೂ ನಿನ್ನಲ್ಲಿವೆ, ನೀನು ಏನನ್ನು ಬೇಕಾದರೂ ಮಾಡಬಹುದು. ಎಲ್ಲವನ್ನೂ ಮಾಡಬಹುದು."
* "ನಾವು ಏನು ಎನ್ನುವುದನ್ನು ನಮ್ಮ ಯೋಚನೆಗಳು ಹೇಳುತ್ತವೆ, ಆದ್ದರಿಂದ ನಮ್ಮ ಯೋಚನೆಗಳ ಮೇಲೆ ನಮಗೆ ಗಮನವಿರಬೇಕು."

# ೩. ಬಸವಣ್ಣ

ಕನ್ನಡದ ಒಬ್ಬ ತತ್ತ್ವಜ್ಞಾನಿ, ವಚನಕಾರರಾದ ಬಸವಣ್ಣನವರು ಕ್ರಿ.ಶ ೩ನೇ ಮೇ ೧೧೩೪ರಲ್ಲಿ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಜನಿಸಿದರು. ಇವರ ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಇವರ ಕಲಚೂರಿ ಅರಸ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು ಮತ್ತು ಸಾಮಾಜಿಕ ಸುಧಾಕರರಾಗಿದ್ದರು. ಇವರು ಇಷ್ಟಲಿಂಗ ಹಾರವನ್ನು ಪರಿಚಯಿಸಿದ್ದಾರೆ. ಇವರು ಅನುಭವ ಮಂಟಪವನ್ನು ಸ್ಥಾಪಿಸಿದರು. ಅಲ್ಲಿ ಸಾಮಾಜಿಕ, ಆರ್ಥಿಕ, ಮಹಿಳೆಯರ ಆಧ್ಯಾತ್ಮಿಕ ಮತ್ತು ಪ್ರಾತಂಟಿಕ ಪ್ರಶ್ನೆಗಳನ್ನು ಮುಕ್ತವಾಗಿ ಚರ್ಚಿಸುತ್ತಿದ್ದರು. ಈ ಮಂಟಪದಲ್ಲಿ ಯಾವುದೇ ಜಾತಿ-ಮತ, ಮೇಲು-ಕೀಳು, ಗಂಡಸು-ಹೆಂಗಸು ಎನ್ನುವ ಭೇದವಿಲ್ಲದೆ ಎಲ್ಲರು ಇದರಲ್ಲಿ ಭಾಗವಹಿಸುತ್ತಿದ್ದರು. ಇವರನ್ನು ಕರ್ನಾಟಕದ "ಮಾರ್ಟಿನ್ ಲೂಥರ್" ಎಂದು ಕರೆಯುತ್ತಾರೆ. ಇವರು ಕ್ರಿ.ಶ ೧೧೯೬ ರಲ್ಲಿ ಕೂಡಲ ಸಂಗಮದಲ್ಲಿ ಮರಣ ಹೊಂದಿದ್ದಾರೆ.

## ➤ ಧಾರ್ಮಿಕ ಬೆಳವಣಿಗೆಗಳು:

* ಬಸವಣ್ಣನವರ ದೃಷ್ಟಿಯಲ್ಲಿ ದೇವರು ಒಬ್ಬನೆ ಮತ್ತು ಅವರು (ದೇವರು) ಮಾನವರಲ್ಲಿದ್ದಾನೆಯೇ ಹೊರತು, ಗುಡಿ-ಗುಂಡಾರ-ಗಳಲ್ಲಿ ಇಲ್ಲಾ ಎಂದಿದ್ದಾರೆ. ಕೆಲಸ ಮಾಡಿ ಜೀವನ ನಡೆಸಬೇಕು. ಆಲಸ್ಯತನ ಜೀವನವಲ್ಲ ಎಂದಿದ್ದಾರೆ. ಸುಳ್ಳು ಹೇಳುವುದು, ಮೋಸ ಮಾಡುವುದು, ಕೊಲೆ-ಸುಲಿಗೆ ಮಾಡುವುದು, ದರೋಡೆ ಮಾಡುವುದು, ಪ್ರಾಣಿ ಬಲಿ ನೀಡುವುದು, ಪರಸ್ತ್ರೀಯರ ಮೇಲೆ



ಬಸವಣ್ಣ

ಕಣ್ಣು ಹಾಕುವುದು, ಅಸಭ್ಯವಾಗಿ ವರ್ತಿಸುವುದು ಇವುಗಳೆಲ್ಲ ಅಪರಾಧಗಳು ಎಂದು ಹೇಳಿದ್ದಾರೆ.

* ಕೆಲಸದಲ್ಲಿ ಮೇಲು-ಕೀಳು ಇರುವುದಿಲ್ಲ. ಎಲ್ಲಾ ಕೆಲಸಗಳು ಒಂದೇ ಪುರುಷರಂತೆ ಮಹಿಳೆಯರಿಗೂ ಸಮಾನ ಹಕ್ಕಿದೆ. ತನ್ನ ಜೀವನವನ್ನು ರೂಪಿಸಿಕೊಳ್ಳುವ ಹಕ್ಕಿದೆ ಎಂದು ಹೇಳಿ ಜನರಲ್ಲಿ ಹೆಣ್ಣು-ಗಂಡು, ಎಂದು ಹೇಳಿ ಮಹಿಳೆಯರ ಶಿಕ್ಷಣಕ್ಕೆ ಭೇದವಿರಬಾರದು ಎಂದಿದ್ದಾರೆ, ಹೀಗೆ ಸಮಾನತೆ, ಕಾಯಕ, ದಾಸೋಹ ತತ್ವಗಳನ್ನು ಸ್ವೀಕರಿಸುವ ಮತ್ತು ಆಚರಿಸುವ ಸ್ವಾತಂತ್ರ್ಯವಿದೆ. ಯಾರು ಬೇಕಾದರೂ ಶಿವಶರಣರಾಗಬಹುದು ಎಂದು ಬಸವಣ್ಣನವರು ಸಾರಿದ್ದಾರೆ.

* ಸುಳ್ಳು ದೇವರುಗಳನ್ನು ನೆನೆಯುತ್ತ, ಸುತ್ತಿಸುತ್ತ ಮತ್ತು ಪುರೋಹಿತಶಾಹಿಯಿಂದ ನಿರಂತರವಾಗಿ ವಂಚನೆಗೊಳಗಾಗುತ್ತಿರುವ ಜನರಿಗೆ ಬಸವಣ್ಣನವರು ಹೊಸ ಜೀವನವನ್ನು ನೀಡಿದ್ದಾರೆ.

* ಜಾತಿ, ಮತ, ಲಿಂಗಗಳ ಭೇದವನ್ನು ತಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣರಾದರು. ಬಸವಣ್ಣನವರನ್ನು "ಜಗಜ್ಯೋತಿ ಬಸವೇಶ್ವರ", "ಕ್ರಾಂತಿಯೋಗಿ ಬಸವೇಶ್ವರ", "ಭಕ್ತಿ-ಭಂಡಾರಿ ಬಸವಣ್ಣ", "ಮಹಾ ಮಾನವತಾವಾದಿ ಬಸವಣ್ಣ", "ಕಾಯಕಯೋಗಿ ಬಸವಣ್ಣ" ಎಂದೂ ಕರೆಯಲಾಗುತ್ತದೆ. ಮಾನವೀಯತೆ, ಕಾಯಕ ನಿಷ್ಠೆ, ಧರ್ಮದ ಬುನಾದಿಯಾಗಬೇಕು ಎಂದು ಬಲವಾಗಿ ನಂಬಿದ್ದರು.

* ಬಸವಣ್ಣನವರು ತಮ್ಮ ವಚನಗಳ ಮೂಲಕ ಎಲ್ಲರಿಗೂ ಜೀವನದ ಸಾರ ನೀಡಿದ್ದಾರೆ, "ಕಾಯಕವೇ ಕೈಲಾಸ", "ದಯವೇ ಧರ್ಮದ ಮೂಲವಯ್ಯ" ಎಂದು ಸಾರಿ ಹೇಳಿದ್ದಾರೆ.

ಹಾಗೂ ಮಾನವತಾವಾದಕ್ಕೆ ಸಾಹಿತ್ಯದ ಸ್ಪರ್ಶ ನೀಡಿದ್ದಾರೆ. ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ವಚನಗಳ ಮೂಲಕ ಅಪೂರ್ವ ಕೊಡುಗೆ ನೀಡಿದ್ದಾರೆ. ಇದುವರೆಗೆ ಅವರ ಸುಮಾರು ೧೩೦೦ ವಚನಗಳನ್ನು ಸಂಗ್ರಹಿಸಲಾಗಿದೆ.

* ಬಸವಣ್ಣನವರ ಪ್ರೇರಣೆಯಿಂದ ಹರಿಜನ ಮತ್ತು ಬ್ರಾಹ್ಮಣ ಕುಟುಂಬಗಳ ನಡುವೆ ನಡೆದ ಅನುಲೋಮ ಅಂದರೆ ಅಂತರ್ಜಾತಿ ವಿವಾಹ ಕಲ್ಯಾಣದ ಕ್ರಾಂತಿಗೆ ಮುನ್ನುಡಿಯಾಗಿದೆ. ಇವರು "ಷಟ್‌ಸ್ಥಲ ವಚನ", "ಕಾಲಜ್ಞಾನ ವಚನ", "ಮಂತ್ರಗೋಪ್ಯ", "ಶಿಖಾರತ್ನ ವಚನ" ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಇವರನ್ನು ಕುರಿತಂತೆ ಕನ್ನಡ, ತೆಲುಗು, ಸಂಸ್ಕೃತ, ತಮಿಳು, ಮರಾಠಿ, ಹಿಂದಿ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಪುರಾಣಗಳು ರಚನೆಯಾಗಿವೆ.

## ➢ ಸಾಮಾಜಿಕ ಸಮಾನತೆ :-

* ಶೂದ್ರರಾದ ರೈತಾಪಿ ಜನರು ಕಾಯಕಜೀವಿಗಳು, ಮಹಿಳೆಯರು ಮತ್ತು ಪಂಚಮರು ಈ ದೇಶದಲ್ಲಿ ಸಹಸ್ರಾರು ವರ್ಷಗಳಿಂದ ಮನುಧರ್ಮದ ಪುರುಷ ಪ್ರಧಾನವಾದ ವರ್ಣ ವ್ಯವಸ್ಥೆಯಿಂದಾಗಿ ಹೇಳಬಾರದ ಕಷ್ಟಪಟ್ಟಿದ್ದರು. ಮೇಲ್ವರ್ಗ ಮತ್ತು ಮೇಲ್ಜಾತಿಯ ಅನುತ್ಪಾದಕ ಪುರುಷರಿಗಾಗಿಯೇ ಬದುಕಿನ ಎಲ್ಲಾ ಸುಖಭೋಗಗಳು ಮೀಸಲಾಗಿದ್ದವು. ಇವರು ಮಾತ್ರ ಜನಿವಾರ ಧರಿಸುವ ಹಕ್ಕನ್ನು ಪಡೆದಿದ್ದರು. ಆದರೆ ಇದನ್ನು ಬಸವಣ್ಣನವರು ವಿರೋಧಿಸಿದ್ದಾರೆ.

* ಜನಿವಾರ ಧರಿಸುವ ಬ್ರಾಹ್ಮಣರು ಓದಿರಬಹುದು, ಬರೆದಿರಬಹುದು. ಆದರೆ ಕಾಯಕ ಜೀವಿಯಾಗಿ ಉತ್ಪಾದನೆಯಲ್ಲಿ ತೊಡಗಲಿಲ್ಲ. ಉತ್ಪಾದನೆಯ ಅನುಭವದಿಂದ ಬರುವ ಜ್ಞಾನವನ್ನು ಹಿಂದಿನ ಕಾಲದಲ್ಲಿ ಅವನೆಂದೂ ಪಡೆಯಲಿಲ್ಲ. ಕ್ಷತ್ರಿಯನಾಗಿರಬಹುದು

ಆದರೆ ಅವರಾದರೂ ಅತ್ಯ ಎಂದಿಗೂ ಉತ್ಪಾದನೆಯಲ್ಲಿ ತೊಡಗಲಿಲ್ಲ. ವೈಶ್ಯ ಅಥವಾ ವೈಶ್ಣವರು ವಸ್ತುಗಳ ಮಾರಾಟ ಮಾಡಿರಬಹುದು, ಕೃಷಿಭೂಮಿಯ ಒಡೆಯನೂ ಆಗಿರಬಹುದು, ಆದರೆ ಸ್ವತಃ ಉತ್ಪಾದನೆ ಮಾಡಲಿಲ್ಲ. ಈ ಮೂರೂ ವರ್ಣದವರಿಗೂ, ವರ್ಗದ-ವರಿಗೂ ಜನಿವಾರ ಇತ್ತು.

* ಆದರೆ ಉತ್ಪಾಧನೆಯಲ್ಲಿ ತೊಡಗಿದ ಕಾಯಕ ಜೀವಿಗಳಿಗೆ ಮತ್ತು ಪಂಚಮರಿಗೆ ಜನಿವಾರ ಇಲ್ಲ. ಯಾರಿಗೆ ಜನಿವಾರ ಇತ್ತೋ ಅವರು ದುಡಿಯದೇ ಸುಖ ಜೀವನವನ್ನು ಅನುಭವಿಸುತ್ತಿದ್ದರು. ಯಾರಿಗೆ ಜನಿವಾರ ಇರಲಿಲ್ಲವೋ ಅವರು ದುಡಿದರೂ ಸಹ ಕಷ್ಟ ಜೀವನವನ್ನು ಅನುಭವಿಸುತ್ತಿದ್ದರು. ಇದನ್ನೆಲ್ಲ ನೋಡಿದ ಬಸವಣ್ಣನವರು ಈ ಅನ್ಯಾಯದ ವಿರುದ್ಧ ಸಿಡಿದೆದ್ದರು.

* "ಜಾತಿ ಸಂಕರವಾದ ಬಳಿಕ ಕುಲವನರಸುವರೇ?" ಎಂದು ಪ್ರಶ್ನಿಸಿ ಕಾಯಕ ಜೀವಿಗಳ ಕೇಂದ್ರಿತ ಶರಣ ಸಂಕುಲವನ್ನು ಸೃಷ್ಟಿಸಿದರು, ವಿವಿಧ ಕಾಯಕಗಳ ಶೂದ್ರರಿಗೆ, ಮಹಿಳೆಯರಿಗೆ ಮತ್ತು ಪಂಚಮರಿಗೆ ಮೊದಲ ಬಾರಿಗೆ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದರು. ಅವರೆಲ್ಲ ಅನುಭವ ಮಂಟಪದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು.

* ಭಾರತದಲ್ಲಿ ವಿವಿಧ ಜಾತಿಗಳ ಕಾಯಕಜೀವಿಗಳು ಮೊದಲ ಬಾರಿಗೆ ಜಾತಿಯನ್ನು ಮೀರಿ ಒಂದು ವರ್ಗವಾಗಿದ್ದು ಶರಣ ಸಂಕುಲದಲ್ಲಿ ಎಂಬುದು ಹೆಮ್ಮೆಯ ವಿಚಾರವಾಗಿದೆ. ಅವರೆಲ್ಲ ತಮ್ಮ ಕಾಯಕಗಳ ಹೆಸರುಗಳನ್ನು ಅಭಿಮಾನದಿಂದ ಉಳಿಸಿಕೊಂಡ-ರು. ಆದರೆ ಕಾಯಕಗಳ ಒಳಗೆ ಇದ್ದ ಜಾತಿ ವಿಷವನ್ನು ಹೊರ ಹಾಕಿದರು. ಈಗ ಶರಣರಲ್ಲಿ ಕುಮಗಾರ, ಮಾದಾರ,

ಮೇದಾರ, ಡೋಹರ, ಅಂಬಿಗ ಮುಂತಾದ ಪದಗಳು ಜಾತಿ ಸೂಚಕವನ್ನು ಕಳೆದುಕೊಂಡು ಕಾಯಕ ಸೂಚಕಗಳಾಗಿ ಉಳಿದವು.

## ಕಾಯಕವೇ ಕೈಲಾಸ:

ಕಾಯಕ ಎಂದರೆ ಕೆಲಸ. ಕೈಲಾಸ ಎಂದರೆ ಸ್ವರ್ಗ. ಕಾಯಕವೇ ಕೈಲಾಸ ಎಂದರೆ ನಾವು ನಮ್ಮ ಕೆಲಸದಲ್ಲಿ ದೇವರನ್ನು ಕಾಣಬೇಕು. ನಮ್ಮ ಕೆಲಸ ನಿರಂತರ ಹಾಗೂ ನಿಷ್ಠೆಯಿಂದ ಇರಬೇಕು. ನಿಷ್ಠೆಯಿಂದ, ಯಾವ ಅಪೇಕ್ಷೆಗಳನ್ನು ಕೆಲಸವನ್ನು ಮಾಡಿದರೆ ಕೈಲಾಸವೇ ಬಂದಂತೆ, ಸ್ವರ್ಗವೇ ಭೂಮಿಗೆ ಬಂದಂತೆ. ನಾವು ನಮ್ಮ ಕೆಲಸವನ್ನು ನಿರಂತರವಾಗಿ ಮತ್ತು ನಿಷ್ಠೆಯಿಂದ ಮಾಡಿದಾಗ. ಅದಕ್ಕೆ ತಕ್ಕ ಫಲ ನಮಗೆ ದೊರೆತೇ ದೊರೆಯುತ್ತದೆ. ಆ ಫಲದಿಂದ ನಾವು ಸುಖ. ಸಂತೋಷದಿಂದ, ನೆಮ್ಮದಿಯಿಂದ ಜೀವಿಸಬಹುದು. ಮೊದಲು ಕಾರ್ಯವಾಗಬೇಕು, ಕೆಲಸ ವಾಗಬೇಕು ನಂತರವೇ ಅದರ ಫಲ ದೊರೆಯುತ್ತದೆ. ಬರಿ ಕೆಲವನ್ನು ಮಾಡದೇ, ಕೇವಲ ಫಲವನ್ನು ಬಯಸುತ್ತಾ ಕುಳಿತ್ತರೆ ಅದಕ್ಕೆ ತಕ್ಕ ಫಲ ದೊರೆಯುತ್ತದೆ. ಅಂದರೆ ಸೋಮಾರಿತನ ಬೆಳೆಯುತ್ತದೆ. ಆದ್ದರಿಂದ ನಾವು ಏನೇ ಕೆಲಸ ಮಾಡಿದರೂ ಅದಕ್ಕೆ ತಕ್ಕನಾದ ಫಲ ಇದ್ದೇ ಇರುತ್ತದೆ. ಒಳ್ಳೆಯದು ಮಾಡಿದರೆ ಒಳ್ಳೆಯದು. ಕೆಟ್ಟದ್ದು ಮಾಡಿದರೆ ಕೆಟ್ಟದ್ದು.

# ಉಪಸಂಹಾರ :-

ಆದರ್ಶ ವ್ಯಕ್ತಿಗಳು ಹೇಗಿರುತ್ತಾರೆ. ಅವರ ವ್ಯಕ್ತಿತ್ವ ಹೇಗಿರುತ್ತಾರೆ. ಆದರ್ಶ ವ್ಯಕ್ತಿಗಳಲ್ಲಿ ಎಷ್ಟು ಪರಿಶ್ರಮ, ಸಾಮರಸ್ಯ, ಪ್ರೀತಿ, ತೃಪ್ತಿ, ಶಾಂತತೆ, ಸಹಿಷ್ಣುತೆ, ಒಳ್ಳೆಯ ಗುಣ ಮತ್ತು ದೃಢತೆ, ಎಲ್ಲವನ್ನು ಸಹಿಸಿಕೊಳ್ಳುವ, ಅನುಸರಿಸಿಕೊಳ್ಳುವ ಭಾವನೆ ಇರಬೇಕು ಎಂದು ಇಲ್ಲಿ ವ್ಯಕ್ತವಾಗಿದೆ. ಮಹಾತ್ಮ ಗಾಂಧೀಜಿ, ಸ್ವಾಮಿ ವಿವೇಕಾನಂದರು, ಬಸವಣ್ಣ ಇವರು ಆದರ್ಶ ವ್ಯಕ್ತಿಗಳಾಗಿದ್ದಾರೆ. ಬರಿ ಅಥವಾ ಕೇವಲ ಇವರು ಅಷ್ಟೇ ಅಲ್ಲಾ ಅಂತಹ ಅನೇಕಾ-ಅನೇಕ ಆದರ್ಶ ವ್ಯಕ್ತಿಗಳು ನಮ್ಮ ಜಗತ್ತಿನಲ್ಲಿ ಇದ್ದಾರೆ.

ಮಹಾತ್ಮ ಗಾಂಧಿ ಅವರದು ಅಹಿಂಸೆ, ಸತ್ಯ, ಶ್ರದ್ಧೆ, ಧರ್ಮಶ್ರದ್ಧೆಗಳು ತತ್ವಗಳಾದರೆ, ಸ್ವಾಮಿ ವಿವೇಕಾನಂದ ಅವರದು ಅದ್ವೈತ ಸಿದ್ಧಾಂತ ಹಾಗೂ ವಿಶ್ವ ಪರ್ಯಟನೆ ಮಾಡಿ ನಮ್ಮ ದೇಶದ ಯೋಗಗಳು, ತತ್ವಗಳನ್ನು ಎತ್ತಿ ಹಿಡಿದರು. ಬಸವಣ್ಣ ಅವರದು ಸರಳತೆಯ ಗುಣ ಹಾಗು ಅವರು ಅನುಭವವನ್ನು ಸ್ಥಾಪಿಸಿ ಅಲ್ಲಿ ಜಾತಿ, ಭೇದ, ಭಾವಗಳನ್ನು ತೊಲಗಿಸುವ ಪ್ರಯತ್ನವನ್ನು ಮಾಡಿದರು. ಕೇವಲ ಮಂಟಪದಲ್ಲಿಂತೇ ಅಲ್ಲಾ ದೇಶದಲ್ಲಿರು ಜಾತಿ-ಭೇದ, ಮಹಿಳೆ ಹಾಗೂ ಪುರುಷ ಭೇದಗಳು ದೂರ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

# ಉಲ್ಲೇಖಗಳು

| ಕ್ರಮಸಂ | ಉಲ್ಲೇಖಗಳ ವಿಷಯ |
|---|---|
| ೦೧ | ದಿ ಸ್ಟೋರಿ ಆಫ್ ಮೈ ಎಕ್ಸ್‌ಪೆರಿಮೆಂಟ್ಸ್ ವಿಥ್ ಟ್ರುತ್ |
| ೦೨ | ಸ್ವಾಮಿ ವಿವೇಕಾನಂದರ ಸಂಭಾಷಣೆಗಳು |
| ೦೩ | ಚಿಕ್ಯಾಗೋ ಉಪನ್ಯಾಸ |
| ೦೪ | ಬಸವ ಪುರಾಣ |
| ೦೫ | ಅಂತರ್ಜಾಲ ತಾಣಗಳು |

Head
Dept. of Kannada
G.P.P. Arts, Commerce & V.V.S. Science
College, SINDAGI-586128.

Co-ordinator IQAC
G. P. Porwal Arts, Comm & V.V. Salimath
Science College, SINDGI-586128. Dt. Vijayapur

Principal,
G. P Porwal Arts, Comm &
V. V. Salimath Sc. College
SINDGI-586128. College Code: 523